1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 54/2025</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಡಾಃಸುಮ | ಪಿಡಬ್ಲೂ -10 |
| ಗಂಡನ ಹೆಸರು | - | ಡಾಃಭರತ್ ಕುಮಾರ | ಸಿ ಡಬ್ಲ್ಯು 15 |
| ವಯಸ್ಸು | - | 48 ವರ್ಷ | |
| ಉದ್ಯೋಗ | - | ಪ್ರಸುತಿ ಮತ್ತು ಸ್ತ್ರೀ ರೋಗ ತಜ್ಞರು ಹಿಮ್ಸ್ ಆಸ್ಪತ್ರೆ, ಹಾಸನ | |
| ವಾಸ ಸ್ಥಳ | - | ಹಾಸನ | |

(The accused is in judicial custody and today he is produced through video conferencing from District Prison, Chikkamagaluru and before recording the evidence of witness, it is got confirmed from the accused that the voice is clearly audible to him.)

ದಿನಾಂಕಃ 17-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ನಾನು 2013 ರಿಂದ ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿ ಪ್ರಸುತಿ ಮತ್ತು ಸ್ತ್ರೀ ರೋಗ ತಜ್ಞೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿಃ 15-01-2025 ರಂದು ನಾನು ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದ ಸಮಯದಲ್ಲಿ ಮಧ್ಯಾಹ್ನ ಸುಮಾರು 12 ಗಂಟೆಗೆ ಶಾರದ ಕೋಂ ಮಂಜು ರವರಿಗೆ ನಿರಂತರವಾಗಿ ಪಿಟ್ಸ್ ಬರುತ್ತಿತ್ತು ಎಂಬ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಮೊದಲಿಗೆ ಆಕೆಯನ್ನು ಅವರ ತಾಯಿ ಮತ್ತು ಗಂಡ ಕರೆದುಕೊಂಡು

ಬಂದಿದ್ದರು. ಶಾರದವರನ್ನು ಪರೀಕ್ಷೆ ಮಾಡಿ ನೋಡಿದಾಗ ಆಕೆ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದು, ಯಾವುದಕ್ಕೂ ಸ್ಪಂದಿಸುತ್ತಿರಲಿಲ್ಲ. ನಾನು ಆಕೆಯನ್ನು ಹೊರರೋಗಿ ವಿಭಾಗದಲ್ಲಿ ಪರೀಕ್ಷಿಸಿ ಆಕೆಯ ಗಂಡ ನೀಡಿದ ವಿವರಗಳನ್ನು ದಾಖಲು ಮಾಡಿದೆನು. ಸಾಕ್ಷಿಯು ನೀಡಿದ ಶಾರದರವರ ಹೊರರೋಗಿ ಚೀಟಿಯ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.15 ಎಂದು ಗುರುತಿಸಲಾಗಿರುತ್ತದೆ.

3. ನಾವು ಕೂಡಲೇ ಶಾರದವರನ್ನು ತುರ್ತು ಚಿಕಿತ್ಸಾ ಘಟಕಕ್ಕೆ ದಾಖಲಿಸಿಕೊಂಡು ಚಿಕಿತ್ಸೆ ಪ್ರಾರಂಭಿಸಿದೆವು. ಗರ್ಭಿಣಿ ಮಹಿಳೆಗೆ ಪಿಟ್ಸ್ ಬಂದರೆ ಆಕೆಗೆ ಹೆರಿಗೆ ಮಾಡಿಸಿದರೆ ಸರಿಯಾಗುತ್ತದೆ ಮತ್ತು ಆಕೆಗೆ ಮೊದಲನೇ ಹೆರಿಗೆ ಬೆಂಗಳೂರಿನ ವಾಣಿ ವಿಲಾಸ್ ಆಸ್ಪತ್ರೆಯಲ್ಲಿ ಸಿಜೇರಿಯನ್ ಮುಖಾಂತರ ಆಗಿದ್ದು ಆಕೆ ನಮ್ಮ ಆಸ್ಪತ್ರೆಗೆ ಬಂದಾಗಲೂ ಸಹ ಹೆರಿಗೆ ನೋವು ಇದ್ದ ಕಾರಣ ನಾವು ಆಕೆಗೆ ಹೆರಿಗೆ ಮಾಡಿಸಲು ನಿರ್ಧರಿಸಿದೆವು. ಅದಕ್ಕೆ ಆಕೆಯ ತಾಯಿ ಮತ್ತು ಗಂಡನ ಒಪ್ಪಿಗೆಯನ್ನು ಪಡೆದೆವು.

4. ನಂತರ ಅದೇ ದಿನ ರಾತ್ರಿ 8.48 ಗಂಟೆಗೆ ನಮ್ಮ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಹೇಮರವರು ಶಾರದರವರಿಗೆ ಜನರಲ್ ಅನಸ್ತೇಸಿಯ ನೀಡಿದ ಮೇರೆಗೆ ನಾನು ಆಕೆಗೆ ಶಸ್ತ್ರಚಿಕಿತ್ಸೆ ಮಾಡಿ 2 ಕೆ.ಜಿ. ತೂಕದ ಗಂಡುಮಗುವನ್ನು ಹೊರತೆಗೆದಿರುತ್ತೇನೆ. ಆದರೆ ಶಾರದರವರಿಗೆ ಹೆರಿಗೆಯ ನಂತರವು ಪ್ರಜ್ಞೆ ಬರಲಿಲ್ಲ. ಆಕೆಯನ್ನು ವೆಂಟಿಲೇಟರಿನಲ್ಲಿಯೇ ಇಡಲಾಗಿತ್ತು ಮತ್ತು ಆಕೆಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಆಕೆ ಚಿಕಿತ್ಸೆಗೆ ಸ್ಪಂದಿಸದೇ ಆಕೆ ದಿಃ 21-01-2025 ರಂದು ಬೆಳಿಗ್ಗೆ 8.35 ಗಂಟೆಗೆ ಮೃತಪಟ್ಟರು.

5. ಶಾರದವರನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಿಂದ ನಮ್ಮ ಆಸ್ಪತ್ರೆಗೆ ಕಳುಹಿಸಿ ಕೊಟ್ಟ ಬಗ್ಗೆ ರೇಫರಲ್ ಕಾರ್ಡಿನ ದೃಢೀಕೃತ ಪ್ರತಿಯನ್ನು ನಮ್ಮ ಆಸ್ಪತ್ರೆಯ ಕ್ಯಾಸುಲಿಟಿ ಮೆಡಿಕಲ್ ಆಫೀಸರ್ ರವರು ನೀಡಿದ್ದು, ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ರೇಫರಲ್ ಕಾರ್ಡಿನ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.13 ಎಂದು ಗುರುತಿಸಲಾಗಿದೆ.

6. ನಮ್ಮ ಆಸ್ಪತ್ರೆಯ ಕ್ಯಾಸುಲಿಟಿ ಮೆಡಿಕಲ್ ಆಫೀಸರ್ ರವರಾದ ಡಾಃ ವಿನಯರವರು ಶಾರದವರನ್ನು ಪರೀಕ್ಷಿಸಿ ಘಟನೆಯ ಹಿನ್ನಲೆಯನ್ನು ಎಂ.ಎಲ್.ಸಿ. ವಹಿಯನ್ನು ದಾಖಲಿಸಿದ್ದಾರೆ. ಸದರಿ ಎಂ.ಎಲ್.ಸಿ. ವಹಿಯ ದೃಢೀಕೃತ ಪ್ರತಿಯನ್ನು ವಿನಯರವರು ನೀಡಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಎಂ.ಎಲ್.ಸಿ. ವಹಿಯ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.14 ಎಂದು ಗುರುತಿಸಲಾಗಿದೆ.

7. ಮೊದಲಿಗೆ ಚಾಸಾ.15 ರವರು ಶಾರದವರನ್ನು ಪರೀಕ್ಷಿಸಿದ ಬಗ್ಗೆ ಹೊರರೋಗಿ ಚೀಟಿಯ ದೃಢೀಕೃತ ಪ್ರತಿಯನ್ನು ನಮ್ಮ ಆಸ್ಪತ್ರೆಯ ಕ್ಯಾಸುಲಿಟಿ ಮೆಡಿಕಲ್ ಆಫೀಸರ್ ರವರು ನೀಡಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಹೊರರೋಗಿ ಚೀಟಿಯ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.15 ಎಂದು ಗುರುತಿಸಲಾಗಿದೆ.

8. ಶಾರದವರನ್ನು ಒಳರೋಗಿಯಾಗಿ ದಾಖಲಿಸಿದ ಬಗ್ಗೆ ನಮ್ಮ ಆಸ್ಪತ್ರೆಯ ನಮ್ಮ ಆಸ್ಪತ್ರೆಯ ಕ್ಯಾಸುಲಿಟಿ ಮೆಡಿಕಲ್ ಆಫೀಸರ್ ರವರು ದೃಢೀಕೃತ ಪ್ರತಿಯನ್ನು ನೀಡಿದ್ದು, ಅದನ್ನು ನೋಡಿದರೆ

ಗುರುತಿಸುತ್ತೇನೆ. ಸಾಕ್ಷಿಯು ಸದರಿ ಚೀಟಿಯ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.16 ಎಂದು ಗುರುತಿಸಲಾಗಿದೆ

9. ಶಾರದರವರಿಗೆ ನೀಡಲಾದ ಚಿಕಿತ್ಸೆ ಮತ್ತು ಪರೀಕ್ಷಾ ವರದಿಗಳನ್ನು ಒಳಗೊಂಡ ಕೇಸ್ ಶೀಟಿನ ದೃಢೀಕೃತ ಪ್ರತಿಗಳನ್ನು ನಮ್ಮ ಆಸ್ಪತ್ರೆಯ ಕ್ಯಾಸುಲಟಿ ವೈದ್ಯಾಧಿಕಾರಿಗಳು ನೀಡಿದ್ದು, ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಕೇಸ್ ಶೀಟಿನ ದೃಢೀಕೃತ ಪ್ರತಿಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.17 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ, ಅವುಗಳನ್ನು ನಿಪಿ.17(ಇ), 17(ಎಫ್), 17(ಜಿ), 17(ಹೆಚ್) ಮತ್ತು ನಿಪಿ.17(ಐ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಜಿ.ಎಸ್.ಎಸ್ ವಕೀಲರಿಂದಃ</u>

10. ಶಾರದವರಿಗೆ ಪ್ರಜ್ಞೆ ಬರುವಂತೆ ಚಿಕಿತ್ಸೆ ನೀಡಲು ನಿಮ್ಮ ಆಸ್ಪತ್ರೆಯಲ್ಲಿ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಇರಲಿಲ್ಲ, ನಾವು ಆಕೆಗೆ ಪ್ರಜ್ಞೆ ಬರಲು ಚಿಕಿತ್ಸೆ ನೀಡಿದ್ದೇವೆ ಎನ್ನುತ್ತಾರೆ. ಯಾವುದೇ ಗರ್ಭಿಣಿಗೆ ಪಿಟ್ಸ್ ಕಾಯಿಲೆ ಇದ್ದರೆ ಆಕೆಗೆ ಹೆರಿಗೆಯಾಗುವ ಸಮಯದಲ್ಲಿ ಮರಣ ಹೊಂದುವ ಸಂಭವ ಇರುತ್ತದೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ